ಪ್ರಜಾವಾಣಿ

ಸೋಮವಾರ
10ನೇ ಸೆಪ್ಟೆಂಬರ್ 2007

B 3



ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಕಗೊಂಡ ಅಶೋಕ್ ಪೂಜಾರಿ (ಬಲತುದಿ) ಅವರನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಅಭಿನಂದಿಸಿದರು. ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ಸಿ. ಸೋಮಶೇಖರ್ ಉಪಸ್ಥಿತರಿದ್ದರು.

# ಪಾಕ್ ಬಾಲಕನಿಗೆ ಅಪರೂಪದ ಶಸ್ತ್ರಕ್ರಿಯೆ

**ಬೆಂಗಳೂರು:** ಹೃದಯದ ತೊಂದರೆಯಿಂದ ಬಳಲುತ್ತಿದ್ದ ಪಾಕಿಸ್ತಾನದ ಬಾಲಕನೊಬ್ಬನಿಗೆ ಬೆಂಗಳೂರಿನ ನಾರಾಯಣ ಹೃದಯಾಲಯದ ವೈದ್ಯರು ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡುವ ಮೂಲಕ ಎರಡೂ ದೇಶಗಳ ನಡುವಿನ ಬಾಂಧವ್ಯ ವೃದ್ಧಿಗೆ ಶ್ರಮಿಸಿದ್ದಾರೆ.

'ಶಸ್ತ್ರ ಚಿಕಿತ್ಸೆ ಮೂಲಕ ತೌಸೀಫ್ ಹೃದಯವನ್ನು ಮೊದಲಿನಂತೆ ಕಾರ್ಯ ನಿರ್ವಹಿಸುವಂತೆ ಮಾಡಲಾಗಿದೆ. ಇದೊಂದು ಹೊಸ ಪ್ರಯತ್ನ' ಎಂದು ನಾರಾಯಣ ಹೃದಯಾಲಯದ ವೈದ್ಯ ಡಾ.ಶೇಖರ್ ರಾವ್ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಗಡಿಯಂಚಿನ ಅಬ್ಬೋತಬಾದ್ ನಿವಾಸಿ ಮೊಹಮ್ಮದ್ ಸಿದ್ದಿಕಿ ಪುತ್ರ ತೌಸೀಫ್ ಅಹಮ್ಮದ್ ಅಪರೂಪದ ಹೃದಯ ರೋಗದಿಂದ ಬಳಲುತ್ತಿದ್ದ.

ರಕ್ತದ ಪರಿಚಲನೆ, ಶುದ್ಧೀಕರಣ ಮತ್ತು ಆಮ್ಲಜನಕ ಒದಗಿಸುವಲ್ಲಿ ಬಹುಮುಖ್ಯ ಪಾತ್ರವಹಿಸುವ ಶ್ವಾಸಕೋಶ ಹಾಗೂ ಹೃದಯದ ನಡುವೆ ಅಡ್ಡವಾಗಿದ್ದ ಗಡ್ಡೆಯಿಂದ ಆತನ ಹೃದಯಕ್ಕೆ ಸರಿಯಾಗಿ ರಕ್ತ ಪೂರೈಕೆಯಾಗುತ್ತಿರಲಿಲ್ಲ ಮತ್ತು ಹೃದಯದಿಂದ ದೇಹದ ಇತರ ಭಾಗಕ್ಕೆ ರಕ್ತ ಸಾಗುತ್ತಿರಲಿಲ್ಲ. ಇದನ್ನು ತಿಳಿದ ಈ ಬಡ ಕುಟುಂಬ ಚಿಕಿತ್ಸೆಗಾಗಿ ಹಲವು ವೈದ್ಯರಲ್ಲಿ ಪರೀಕ್ಷೆ ಮಾಡಿಸಿದ್ದರು.

ಆದರೆ ಈ ಶಸ್ತ್ರ ಚಿಕಿತ್ಸೆ ಅಪಾಯಕಾರಿಯಾದುದು ಎಂಬ ನೆವವೊಡ್ಡಿ ಕರಾಚಿಯ ಬಹಳಷ್ಟು ವೈದ್ಯರು ಚಿಕಿತ್ಸೆ ನೀಡಲು ಒಪ್ಪಿರಲಿಲ್ಲ. ಆನಂತರ ಚಂಡೀಗಡದ ರೋಟರಿ ನೆರವಿನೊಂದಿಗೆ ಭಾರತದ ಪ್ರಮುಖ ಆಸ್ಪತ್ರೆಗಳಲ್ಲಿ ಪರೀಕ್ಷೆ ಮಾಡಿಸಿದರೂ ವೈದ್ಯರು ಕೈಚೆಲ್ಲಿದರು. ಆಗ ಬೆಂಗಳೂರಿನ ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3190 ಶಸ್ತ್ರ ಚಿಕಿತ್ಸೆಗೆ ನೆರವಾಗಲು ಮುಂದೆ ಬಂದಿತು. ಇದೇ ಆಗಸ್ಟ್ 22 ರಂದು ನಾರಾಯಣ ಹೃದಯಾಲಯದ ವೈದ್ಯ ಡಾ. ದೇವಿಶೆಟ್ಟಿ ಹಾಗೂ ಡಾ. ಶೇಖರ್ ರಾವ್ ಮತ್ತವರ ತಂಡ ಅಪರೂಪದ ಶಸ್ತ್ರಚಿಕಿತ್ಸೆಯನ್ನು 9 ಗಂಟೆಗಳಲ್ಲಿ ನಡೆಸಿ ಯಶಸ್ವಿಯಾದರು.